ಅತ್ತಿಮಬ್ಬೆ ಮತ್ತು ಗುಂಡುಮಬ್ಬೆಯ ವಿದ್ಯಾಭ್ಯಾಸ ಜಿನಚಂದ್ರರ ಬಳಿಯೇ ಸಾಗಿತ್ತು. ಪ್ರತಿಭಾಶಾಲಿಯಾದ ಶಿಲ್ಪಿಯ ಕೈಗೆ ಸಿಕ್ಕಿದಾಗ ಕಗ್ಗಲ್ಲೂ ಮಹಾಮೂರ್ತಿಯಾಗಿ ಬಿಡುವುದು; ಮೃದುವಾದ ಹಾಲ್ಗಲ್ಲು ದೊರೆತರೆ ಶಿಲ್ಪಿಯ ಶ್ರಮವೂ ಕಡಿಮೆಯಾಗುವುದಲ್ಲವೆ? ಈ ಬಾಲಕಿಯರಿಗೆ ಧಾರ್ಮಿಕ ಅಸ್ತಿವಾರವನ್ನು ಭದ್ರವಾಗಿ ಹಾಕಿ ಅದರ ಮೇಲೆ ಮಹಾಕಾವ್ಯಗಳ ಸೌಂದರ್ಯವನ್ನೂ ಸಂದೇಶವನ್ನೂ ಜಿನಚಂದ್ರರು ಬೋಧಿಸಿದರು. ಇನ್ನೊಂದು ಕಡೆ ಈ ಮಕ್ಕಳಿಗೆ ನರ್ತನದ ಅಭ್ಯಾಸವೂ ಆಯಿತು; ಸಂಗೀತಕ್ಕೆ ಒಗ್ಗುವಂತೆ ಸೊಗಸಾದ ಶಾರಿರವನ್ನು ಪಡೆದಿದ್ದ ಈ ಕನ್ಯೆಯರು ಬಾಯ್ದೆರೆದರೆ ಮರಿದುಂಬಿ ಸ್ವರಮಾಡುತ್ತ ಬಿರಿವ ಕಮಲದಿಂದ ತೂರಿಬಂದಂತಾಗುತ್ತಿತ್ತು.

ನಾಗಮಯ್ಯನ ಮನೆಯೆಂದರೆ ಸಾಧುಸಂತರ ಆಗರ; ಕವಿಗಳ ಆಲೆಯ ಮನೆ; ನಾನಾ ಕಲೆಗಳಿಗೆ ಪ್ರೋತ್ಸಾಹ ಕೊಡುವ ಔದಾರ್ಯದ ಸುರತರು ! ಬೆಳಗಿನಿಂದ ಸಂಜೆಯತನಕ ಇಂಥ ರಸಮಯ ಹಾಗೂ ಧಾರ್ಮಿಕ ವಾತಾವರಣವಿರುವ ತಾಣದಲ್ಲಿ ಬೆಳೆದ ಮಕ್ಕಳೂ ಅನಿವಾರ್ಯವಾಗಿ ಅದರ ಪ್ರಭಾವಕ್ಕೆ ಒಳಗಾಗಲೇ ಬೇಕು. ಶ್ರೀಗಂಧವನ್ನು ಧೂಳಮಾಡುವ ಯಂತ್ರಾಗಾರದಲ್ಲಿ ಒಮ್ಮೆ ಸುತ್ತಾಡಿ ಬಂದರೂ ಸಾಕು ನಾವು ಅಡಿಯಿಂದ ಮುಡಿತನಕ ಗಮಗಮಿಸದಿರೆವು. ಸದಾ ಅಲ್ಲಿರುವವರ ಗತಿ ?

ಅತ್ತಿಮಬ್ಬೆ ಮತ್ತು ಗುಂಡುಮಬ್ಬೆಯರು ಅಸಹಾಯ ಶೂರನಾದ ಮಲ್ಲಪನ ಮಕ್ಕಳು; ಕಡುಗಲಿಯಾದ ನಾಗಮಯ್ಯನ ಮೊಮ್ಮಕ್ಕಳು; ಮುಂದಾದರೂ ರಾಜಪುತ್ರನನ್ನು ವರಿಸಬೇಕಾದ ಕನ್ಯಾಮಣಿಗಳು. ಕ್ಷಾತ್ರ ವಾತಾವರಣದ್‌ಲ್ಲಿ ಇದ್ದವರೆಲ್ಲ ಕ್ಷತ್ರಿಯರಾಗಿ ಬಿಡುವರು! ಇವರಿಗೂ ಕತ್ತಿವರಸೆ ಕಲಿಸಿದ್ದಾಯಿತು ! ಕುದುರೆಸವಾರಿ ತಾನಾಗಿಯೇ ಬಂದಿತು. ಬಿಲ್‌ವಿದ್ಯೆಯನ್ನು ಅಣ್ಣಂದಿರು ಕಲಿವಾಗ ಈ ಕನ್ನೆಯರೂ ಕಲಿತರು ! ಬೆಸ್ತರ ಹೆಮ್ಮಕ್ಕಳಿಗೆ ಈಜು ಕಲಿಸಬೇಕು? ಚಿಗುರೊಡೆದ ವಸಂತಮಾಸದ ಕಲ್ಪಲತೆಯಂತೆ ಈ ಕನ್ನೆಯರು ಪ್ರಾಯಕ್ಕೆ ಬಂದರು. ಸಹಜ ಸುಂದರಿಯರಾದ

ಇವರಿಗೆ ಸಂಸ್ಕೃತಿಯ ಒಪ್ಪಹಾಕಿ ಕಲೆಯ ತಿಲಕವನ್ನಿಟು ಕ್ಷಾತ್ರವಿದ್ಯೆಯ ಅಂಚುಕಟ್ಟಿ ದಂತೆ ಇವರಿಬ್ಬರೂ ಕಂಗೊಳಿಸಿದರು ! ಅಕ್ಕಸಾಲಿಯ ಮನೆಯಿಂದ ಆಗ ತಾನೆ ತಂದ ಕನಕ ಪುತ್ತಳಿಗಳಾಗಿ ಇವರು ರಾರಾಜಿಸಿದರು ! ನಾಗಮಯ್ಯನ ಕಣ್ಣಿಗೆ ಮಾತ್ರ ಇವರಿಬ್ಬರೂ ಇನ್ನೂ ಹಸುಳೆಗಳೇ !

ಜಿನಚಂದ್ರಮುನಿಗಳು ಹಣ್ಣು ಹಣ್ಣು ಮುದುಕರಾದರು. ಸೊಂಟ ಬಾಗಿತು. ಕೈಕಾಲಲ್ಲಿ ಕಂಪನ ಮೂಡಿತು. ಕಣ್ ಮಂಜಾದವು. ಆಹಾರವನ್ನು ಕಣ್ಣಲ್ಲಿ ಕಣ್ಣಿಟ್ಟು ಶೋಧಿಸಿದೆ ಜಿನಮುನಿ ಸ್ವೀಕರಿಸುವಂತಿಲ್ಲ. ಇತ್ತ ನಾಗಮಯ್ಯನಿಗೂ ಅದೇ ವಯಸ್ಸು. ಗರುಡಿಯಲ್ಲಿ ಪಳಗಿದ ಮೈ ಇನ್ನೂ ಚೆನ್ನಾಗಿದ್ದರೂ ಮನಸ್ಸು ಮಾತ್ರ ಪರಮಾತ್ಮ ಸಂದರ್ಶನಕ್ಕೆ ಹತೊರೆದು ಹಾತೊರೆದು ಹಣ್ಣಾಗಿ ಹೋಗಿತ್ತು !

“ನಾಗಮಯ್ಯ, ನಾನಿನ್ನು ಸಲ್ಲೇಖನ ತೆಗೆದುಕೊಳ್ಳಬೇಕಪ್ಪ !” ಎಂದು ಜಿನ ಚಂದ್ರರು ಒಮ್ಮೆ ನುಡಿದರು. ನಾಗಮಯ್ಯ ಗರಹೊಡೆದವನಂತೆ ಗಾಬರಿಗೊಂಡನು.

“ಏಕಪ್ಪ ಏನೂ ಮಾತಾಡದೆ ಮಂಕಾದೆ?” ಜಿನಚಂದ್ರರು ಇನ್ನು ಕೆಣಕಿದರು.

“ಮಹಾಸ್ವಾಮಿ, ತಾವು ಸಲ್ಲೇಖನ ತೆಗೆದುಕೊಂಡಾಗ ನನ್ನ ಗತಿ !”

“ನಾಗಮಯ್ಯ, ಯಾರಿಗೆ ಯಾರುಂಟು! ಅವರವರ ಪಾಡು ಅವರದು. ನಾನು ಇನ್ನು ಬದುಕಿರುಬಾರದು. ಬದುಕಿದಷ್ಟೂ ವ್ರತಹೀನನಾಗುವೆನು. ಅನ್ಯರಿಗೆ ಹೊರೆ ಯಾಗುವೆನು. ಜೈನಮುನಿಯ ದೇಹ ಯಾವಾಗ ದಿನಚರಿಗೆ ಅಸಮರ್ಥವಾಗುವುದೋ ಆಗ ಸಲ್ಲೇಖನ ಅನಿವಾರ್ಯ.”

“ನಾನಿರುವವರೆಗೂ ತಾವು ಸಲ್ಲೇಖನ ತೆಗೆದುಕೊಳ್ಳಕೂಡದು. ತಾವಿಲ್ಲದೆ ಒಂದು ದಿನವೂ ನಾನಿರಲಾರೆ” ಎಂದು ನಾಗಮಯ್ಯ ನುಡಿದಾಗ ಗದ್ಗದ ತೋರಿತು. ಸುಮಾರು ಎಂಬತ್ತು ವರ್ಷಗಳಿಂದಲೂ ಇವರಿಬ್ಬರೂ ಜೊತೆಯಾಗಿ ಬೆಳೆದಿದ್ದರು, ಜೊತೆಯಾಗೆ ಬಾಳಿದ್ದರು. ಒಮ್ಮೊಮ್ಮೆ ಅಭಿಪ್ರಾಯ ಭೇದ ಬಂದರೂ ಇವರಿಬ್ಬರ ಸ್ನೇಹಕ್ಕೆ ಎಂದೂ ಚ್ಯುತಿಬಂದರಲಿಲ್ಲ.

“ನಾಗಮಯ್ಯ, ಮೋಹನೀಯಕರ್ಮ ನಿನಗೆ ಉಲ್ಬಣವಾಗಿದೆ. ಇಷ್ಟು ದಿನ ಧಾರ್ಮಿಕ ರಂಗದಲ್ಲಿ ಪಳಗಿದ್ದರೂ ನಿನ್ನ ಅಜ್ಞಾನ ಹೋಗಲಿಲ್ಲವಲ್ಲ ! ನಾನಾರು ನೀನಾರು ? ಹೊತ್ತ ದೇಹವೂ ನಮ್ಮದಲ್ಲ. ಈ ದೇಹವು ಒಂದು ಕರ್ಮದ ಕಂತೆ. ಆತ್ಮವಿಕಾಸಕ್ಕೆ ದಿಗ್‌ಬಂಧನವಾಗಿರುವ ಈ

ಕಾಯವನ್ನು ನಿರ್ದಾಕ್ಷಿಣ್ಯವಾಗಿ ನಾವು ತೊಲಗಿಸಬೇಕಾಗಿದೆ. ರಸಕ್ಕೆ ಪೋಷಕವಾಗಿ ಬಂದಾಗ ಮಾತ್ರ ವ್ಯಾಕರಣ, ಛಂದಸ್ಸು, ಅಲಂಕಾರಾದಿಗಳಿಗೆ ಸುಸ್ವಾಗತವೇ ಹೊರತು ಇವು ರಸಾಭಾಸಕ್ಕೆ ಕಾರಣವಾದಾಗ ನಿರ್ದಾಕ್ಷಿಣ್ಯವಾಗಿ ಹೊರ ನೂಕಬೇಕಾಗುವುದು. ನಮ್ಮ ದೇಹವನ್ನೂ ಈ ದೃಷ್ಟಿಯಲ್ಲಿ ನೋಡಬೇಕು. ಇದುವರಿವಿಗೂ ನನ್ನ ತಪಸ್ಸಿಗೆ ಈ ಕಾಯ ನೆರವಾಯಿತು. ಈಗ ಇದಕ್ಕೂ ಸಾಕಾಗಿದೆ. ನನ್ನ ಕೈಲಾಗುವುದಿಲ್ಲ ಸುಮ್ಮನೇ ಹಿಂಸಿಸಬೇಡ ಎಂದು ಈ ದೇಹ ದಿನದಿನವೂ ಮೊರೆಯಿಡುತ್ತಿದೆ. ಪಾಪ, ಇಂಥದಕ್ಕೆ ಹೆಚ್ಚು ಭಾರ ಹೊರಿಸಲಾರೆ. ಸಲ್ಲೇಖನಕ್ಕೆ ಮನಸಾರೆ ಒಪ್ಪಿಗೆ ಕೊಡು.”

“ಮಹಾಸ್ವಾಮೀ, ತಾವೇನೋ ಅನಾಸಕ್ತರು. ಸುಲಭವಾಗಿ ಹೇಳುತ್ತಿರುವಿರಿ. ನನ ಗಂತು ದಿಕ್ಕೇ ತೋಚುತ್ತಿಲ್ಲ” ಎಂದು ನಾಗಮಯ್ಯ ಕಳವಲಪಟ್ಟನು.

“ನಾಗಮಯ್ಯ, ಮಹರ್ಷಿಗೆ ಮರಣವೇ ಮಹಾನವಮಿ ! ನೀನು ಶ್ರವಣಬೆಳಗೊಳಕ್ಕೆ ಹೋದಾಗ ನೋಡಲಿಲ್ಲವೆ? ಹೆಜ್ಜೆ ಹೆಜ್ಜೆಗೂ ಸಲ್ಲೇಖನದ ಮಹಿಮೆಯನ್ನು ಸಾರುವ ಶಿಲಾಫಲಕಗಳು ! ಸಲ್ಲೇಖನ ತೆಗೆದುಕೊಂಡ ಮಹಾಮಹಿಮರ ಶುಭನಾಮಾವಳಿಯ ತಾರಾಳಿಗಳಂತಿರುವ ಶಿಲಾಶಾಸನಗಳು ! ಸಮಾಧಿ ಮರಣವನ್ನು ಬಾಳಿನುದ್ದಕ್ಕೂ ಹಾರೈಸಿ ಕೊನೆಗೆ ಅದನ್ನು ಪಡೆದು ಹಿಗ್ಗಿದ ಮಹಾವ್ರತಿಗಳ ಪುಣ್ಯಕಥೆಯನ್ನು ಮೈಯಲ್ಲೆಲ್ಲ ಅಚ್ಚೆಯಂತೆ ಧರಿಸಿರುವ ಶಿಲಾಸ್ತಂಭಗಳು ! ಶ್ರವಣಬೆಳುಗುಳ ಸಲ್ಲೇ ಖನದ ಆಗರ ! ಸಮಾಧಿಮರಣದ ತೌರೂರು !” ಎಂದು ಜಿನಚಂದ್ರರು ಆವೇಶ ಗೊಂಡು ನುಡಿದರು.

“ಗುರುವರ್ಯ, ತಾವು ನನಗೂ ಅದೇ ವ್ರತವನ್ನು ಕರುಣಿಸಿಬಿಡಿ. ನಾನೂ ತಮ್ಮನ್ನು ಹಿಂಬಾಲಿಸುವೆನು. ಬಾಳಿನುದ್ದಕ್ಕೂ ನಾನು ಕೇಳಿದ್ದನ್ನು ಇಲ್ಲವೆನ್ನದೆ ಕೃಪೆಗೈದಿರುವಿರಿ. ಪೂಜೆಯಾಗುವ ತನಕ ತಮ್ಮೊಡನಿರುವೆನು. ಚರುಪು ಹಂಚುವ ವೇಳೆಗೆ ನನ್ನನ್ನು ಹೊರಹಾಕುತ್ತಿರುವುದು ಸರಿಯೇ? ನನಗೂ ಸಲ್ಲೇಖನವನ್ನು ದಯಪಾಲಿಸಬೇಕು” ಎನ್ನುತ್ತ ನಾಗಮಯ್ಯ ಮುನಿಗಳ ಕಾಲಿಗೆ ಬಿದ್ದು ಕಂಬನಿ ಸುರಿಸಿದನು.

“ನಾಗಮಯ್ಯ, ಮೇಲೇಳು. ನಾನು ತಪವೆಸಗಿ ಸಾಧಿಸಿದ್ದನ್ನು ನೀನು ಭಾವತಾಪಸಿ ಯಾಗಿ ಸಾಧಿಸಿರುವೆ. ಸಾಧುಸಂತರ ಸೇವೆಯೆಸಗಿ ನೀನು ಕರ್ಮನಿರ್ಜರೆ ಮಾಡಿ ಕೊಂಡಿರುವೆ. ಕವಿಗಳಿಗೆ ಕೈನೀಡಿದ ಕಲ್ಪವೃಕ್ಷವಾಗಿ ನೀನ್ ಲೋಭಕರ್ಮವನ್ನು ಈಡಾಡಿರುವೆ. ದೀನದಲಿತರಿಗೆ ಕೊಡುಗೈ ವೀರನಾಗಿ ವಿಶ್ವಾನುಕಂಪ ತೋರಿರುವೆ. ಅಂದು ನಿನ್ನ ಮೊಮ್ಮಕ್ಕಳು ನರ್ತಿಸಿದಾಗ, ಗರ್ಭಾವತರಣ ಕಲೆಯನ್ನು ಅಭಿವ್ಯಕ್ತಿಗೊಳಿಸಿದಾಗ ಮಹಾನುಭಾವನಾದ ನೀನು ರತ್ನವೃಷ್ಟಿಯನ್ನೇ ಮಾಡಿಸಿಬಿಟ್ಟೆಯಲ್ಲ ! ಪುರಾಣದಲ್ಲಿ ನಾನು ಓದಿದ್ದೆ. ನೀನು ಪ್ರತ್ಯಕ್ಷವಾಗಿ ಅದನ್ನು ಮಾಡಿ ತೋರಿಸಿದೆ. ನಾನು ಹೋದರೂ ನನ್ನಂಥ ಹತ್ತುಜನ ಬೈರಾಗಿಗಳು ನಿನ್ನನ್ನು ಅರಸಿಕೊಂಡು ಬರುವರು ! ಧೈರ್ಯವಾಗಿ ನನ್ನ ಸಲ್ಲೇಖನಕ್ಕೆ ಹೂಗುಟ್ಟು” ಎಂದು ಜಿನಚಂದ್ರರು ಧೈರ್ಯ ಹೇಳಿದರು.

“ಏನಾದರೂ ಆಗಲಿ ಸ್ವಾಮಿ ಅನ್ನನೀರು ಬಿಟ್ಟು ತಾವು ಸೊರಗಿ ಸೊರಗಿ ಸಾಯುವುದನ್ನು ನಾನಂತೂ ನೋಡಲಾರೆ” ಎಂದು ನಾಗಮಯ್ಯ ಬೆಚ್ಚಿದನು.

“ನಾಗಮಯ್ಯ, ಅನಂತರ ಕಾಲದಿಂದ ನಾನು ಅನಂತ ಜನುಮಗಳನ್ನೆತ್ತಿರುವೆನು. ಹುಟ್ಟುತ್ತಿರುವೆನು, ಸಾಯುತ್ತಿರುವೇನು. ಹುಟ್ಟುವುದಕ್ಕಾಗಿಯೇ ಸತ್ತಿರುವೆನು, ಮತ್ತೆ ಸಾಯುವುದಕ್ಕಾಗಿಯೇ ಎಷ್ಟೋ ಸಲ ಹುಟ್ಟಿರುವೆನು ! ಲಂಪಟನಾಗಿ ಅನೇಕ ಭವಗಳಲಲಿ ಬವಣೆ ಪಟ್ಟಿರುವೆನು. ಹೆಣ್ಣಿಗಾಗಿ ಸತ್ತವರಿಗೆ ಕಡಿಮೆಯೆ? ಮಣ್ಣಿಗಾಗಿ ಸತ್ತವರ ಸಂಖ್ಯೆಯನ್ನು ಎಣಿಸಲಾದೀತೆ? ಹೊನ್ನಿಗಾಗಿ ಸಾಯುತ್ತಿರುವವರನ್ನು ಲೆಕ್ಕ ಹಾಕಲು ಸಾಧ್ಯವೇ? ಆದರೆ ದೇವರಿಗಾಗಿ ಎಷ್ಟು ಜನ ಸತ್ತಿರುವರು? ಮರಣವನ್ನು ಆತ್ಮಕ್ಕಾಗಿ ಎಷ್ಟು ಜನ ಅಪ್ಪಿರುವರು ? ಧರ್ಮಕ್ಕಾಗಿ ಎಷ್ಟು ಜನ ಸಾಯಲು ಸಿದ್ಧರಾಗಿರುವರು ? ಸಾಯುವುದು ಅನಿವಾರ್ಯವಾಗಿರುವಾಗ ದೇವರ ಹೆಸರಿನಲ್ಲಿ ಸಾಯೋಣ. ಧರ್ಮದ ಹೆಸರಿನಲ್ಲಿ ಸಾಯೋಣ, ಆತ್ಮೋದ್ಧಾರಕ್ಕಾಗಿ ಮೃತ್ಯುದೇವತೆಯನ್ನು ಕೈಬೀಸಿ ಕರೆಯೋಣ ! ಮನೋದೌರ್ಬಲ್ಯವನ್ನು ಕಿತ್ತೊಗೆದು ಮೇಲೇಳು ಮನಃಪೂರ್ವಕ ನನ್ನ ಸಲ್ಲೇಖನಕ್ಕೆ

ಒಡಂಬಡು; ನೀನು ಅನುಮೋದನ ಪುಣ್ಯವನ್ನು ಪಡೆದು ಪುನೀತನಾಗುವೆ !" ಎಂದು ಜಿನಚಂದ್ರರು ಸಮಾಧಾನ ಮಾಡಿದರು.

"ನೀನು ಏನಾದರೂ ಮಾಡಿಕೋ ತಂದೆ. ಆದರೆ ನನಗೂ ಸಲ್ಲೇಖನ ಕೊಟ್ಟುಬಿಡು. ಈ ಮಹಾವ್ರತದಿಂದ ತಮಗೆ ಒಳ್ಳೆಯದಾಗುವುದಾದರೆ ನನಗೂ ಆಗಬೇಕಲ್ಲ? ತಮ್ಮ ಜೊತೆಯಾಗಿ ನಾನು ಅನ್ನನೀರನ್ನು ಬಿಟ್ಟು ಕೂರುವೆನು. ಅರ್ಜುನನ ಜೊತೆ ಸೇರಿ ಉತ್ತರನೂ ಮಹಾಸಾಹಸಿಯಾದಂತೆ ತಮ್ಮೊಡನಾಡಿ ನಾನೂ ಮಹಾವ್ರತಿಯಾಗುವೆನು! ನನ್ನ ಅಪೇಕ್ಷೆಯನ್ನು ಈಡೇರಿಸಿ ಗುರುದೇವ" ಎಂದು ನಾಗಮಯ್ಯ ಗೋಳಿಟ್ಟನು. ಗಂಡ ಸತ್ತಾಗ, ಹೆಣದೊಡನೆ ಚಿತೆಯೇರಲು ತವಕಿಸುವ ಹದಿಬದೆಯಂತೆ ತವಕಗೊಂಡನು.

ಜಿನಚಂದ್ರರಿಗೆ ದಿಕ್ಕೇ ತೋಚದಂತಾಯಿತು. ನಾಗಮಯ್ಯನಿಗೆ ಸಲ್ಲೇಖನ ನೀಡಿದರೆ ಆತನ ಮಕ್ಕಳು ಮರಿಗಲ ಮೇಲೆ ಯಾವ ಪರಿಣಾಮವಾದೀತೋ ಎಂದು ತುಸು ಯೋಚಿಸಿದರು. ಈತನನ್ನು ತಡೆಯಲು ಏನಾದರೂ ಮಾರ್ಗವುಂಟೋ ಎಂದು ಚಿಂತಿಸಿದರು.

"ನಾಗಮಯ್ಯ, ನಿನಗೆ ನಾನು ಸಲ್ಲೇಖನ ಕೊಡಲಾರೆ. ನೀನು ಗೃಹಸ್ಥ. ಕ್ರಮವಾಗಿ ಮೇಲೇರಿ ಮುನಿಯಾಗಿ ಮಹಾವ್ರತಗಳನ್ನಾಚರಿಸಬೇಕು. ಪಕ್ಕನೆ ಉತ್ಸಾಹಗೊಂಡು ಅನಂತರ ಮುಗ್ಗರಿಸಬಾರದು. ಸಲ್ಲೇಖನವೆಂದರೆ ಅನ್ನ ನೀರನ್ನು ತೊರೆಯುವುದು ಮಾತ್ರವಲ್ಲ. ರಾಗದ್ವೇಷವನ್ನು ತೊರೆದು ನಿರ್ವಿಕರಿಯಾಗಿ ಸಾವನ್ನೂ ಸ್ನೇಹಿತನೆಂದು ತಿಳಿದು ಸತ್ಕರಿಸಬೇಕು. ಪೂರ್ವಭಾವೀ ಶಿಕ್ಷಣವಿಲ್ಲದೆ ಇಂಥ ವ್ರತಗಳಿಗೆ ಕೈಹಾಕಬಾರದು."

"ಗುರುದೇವ, ನಾನೇನು ಮಗುವೆ? ಹುಟ್ಟಿದ್ದು ಬ್ರಾಹ್ಮಣನಾಗಿ, ಬಾಳಿದ್ದು ಕ್ಷತ್ರಿಯನಾಗಿ, ಮೆಚ್ಚಿದ್ದು ಜೈನಧರ್ಮವನ್ನು ! ವಾತಾವರಣದ ಬಲದಿಂದ ನನ್ನಲ್ಲೂ ಧಾರ್ಮಿಕೋತ್ಸಾಹ ಮೊದಲಿಂದಲೂ ಉಕ್ಕೇರಿ ಬಂದಿದೆ. ಶಿಷ್ಯನ ಮೇಲೆ ತಾವೇ ಸಂದೇಹಗೊಂಡರೆ ನನ್ನ ಗತಿ?"

"ನಾಗಮಯ್ಯ, ನೀನು ಹೇಳುವುದನ್ನು ಒಪ್ಪೋಣ, ಆದರೆ ಸಲ್ಲೇಖನವನ್ನು ಇಂತಿಂಥ ಪರಿಸ್ಥಿತಿಯಲ್ಲಿ ಮಾತ್ರ ತೆಗೆದುಕೊಳ್ಳಬಹುದೆಂದು ನಿಯಮವಿದೆ. ದುರ್ಭಿಕ್ಷ ದಲ್ಲಿ, ವಾಸಿಯಾಗದ

ಕಾಯಿಲೆ ಬಂದಾಗ, ದೇಹ ನಶಿಸಿ ದಿನಚರಿಗೆ ಅನರ್ಹವಾದಾಗ ಈ ಸಂದರ್ಭಗಳಲ್ಲಿ ಮಾತ್ರ ಸಾಧಕ, ಸಲ್ಲೇಖನವನ್ನು ತೆಗೆದುಕೊಳ್ಳಬಹುದು."

"ಗುರುದೇವ, ತಾವು ಹೇಳಿದ್ದು ಸಾಮಾನ್ಯರಿಗಾಯಿತು. ಮಹಾಮುನಿ ಜಿನಚಂದ್ರರ ಶಿಷ್ಯನಿಗೆ ಈ ಮಾತು ಅನ್ವಯಿಸಲಾರದು."

"ನಿನ್ನ ಮಕ್ಕಳು ಒಪ್ಪಿಗೆಯನ್ನಿತ್ತರೆ ನನ್ನದೇನೂ ಅಭ್ಯಂತರವಿಲ್ಲ."

"ಮಹಾಸ್ವಾಮಿ, ಯಾರಿಗೆ ಯಾರು? ಬೋನಿಗೆ ಬಿದ್ದ ಹುಲಿ ಪಾರಾಗಬೇಕಾದರೆ ಹಿಡಿದವನ ಅಪ್ಪಣೆ ಬೇಕೆ? ಅವಕಾಶ ಸಿಕ್ಕಿದಾಗ ಕೈಕೊಟ್ಟು ಹೊರಡುವುದೊಂದೇ ಮಾರ್ಗ! ನನ್ನನ್ನು ತಾವು ಮತಾಂತರಗೊಳಿಸಿದಿರಿ. ಈಗ ರೂಪಾಂತರಗೊಳಿಸಲು ಹಿಂಜರಿಯುತ್ತಿರುವಿರಿ. ಜೈನನನ್ನಾಗಿ ಮಾಡಿರುವಿರಿ. ಇದರಿಂದ ತಮಗೆ ಶ್ರೇಯಸ್ಸಾಗುವುದೇ ಸ್ವಾಮಿ? ಶಿಷ್ಯನನ್ನು ಕರ್ಮಾರಣ್ಯದಲ್ಲಿ ಕೈಬಿಟ್ಟು ತಾವು ಮಾತ್ರ ಪಾರಾಗುವುದು ತರವೇ?" ಎಂದು ಆಕ್ಷೇಪಿಸಿದನು. ಜಿನಚಂದ್ರರು ನಿರುತ್ತರರಾದರು. ಕ್ಷಣಕಾಲ ಚಿಂತಿಸಿದರು. ಏನೇನೋ ಎಣಿಕೆ ಹಾಕಿದರು. ನಾಗಮಯ್ಯನ ಕಣ್ಣಿನಲ್ಲಿ ಕಣ್ಣಿಟ್ಟು ನೋಡಿದರು. ನೋಡುತ್ತ ಚಕಿತರಾದರು ! ನಾಗಮಯ್ಯನ ಆಯುಸ್ಸೂ ಮುಗಿಯುತ್ತಾ ಬಂದಿರುವುದನ್ನು ಅವಧಿಜ್ಞಾನದಿಂದ ಅರಿತರು. ತೀರ್ಮಾನಕ್ಕೆ ಬಂದವರಂತೆ ಮುಗುಳ್ನಕ್ಕರು.

"ನಾಗಮಯ್ಯ, ನಿನಗೂ ಸಲ್ಲೇಖನ ಕೊಡುವೆನು. ಆದರೆ ನಿನಗೆ ಕೊಡುವ ಸಲ್ಲೇಖನ ಮೃದುವಾದುದು. ದಿನವೂ ಕ್ರಮವಾಗಿ ಆಹಾರವನ್ನು ತಗ್ಗಿಸಿಕೊಂಡು ಹೋಗ ಬೇಕು. ಮುವತ್ತೆರಡು ತುತ್ತಿನಿಂದ ಪ್ರಾರಂಭಿಸಿ ದಿನವೂ ಒಂದೊಂದು ತುತ್ತು ಕಡಿಮೆಮಾಡಬೇಕು. ನೀರನ್ನೂ ಕಡಿಮೆ ಮಾಡಿಕೊಂಡು ಸಾಗಬೇಕು. ಪ್ರತಿಕ್ಷಣದಲ್ಲೂ ಆತ್ಮಚಿಂತನೆಯನ್ನು ಮಾಡುತ್ತಿರಬೇಕು. ದೇಹದ ನಶ್ವರತೆಯನ್ನು ನೆನೆಯುತ್ತಿರಬೇಕು. ಪರಮಾತ್ಮ ಒಂದೇ ನಮ್ಮದು ಉಳಿದುದೆಲ್ಲ ನಮ್ಮನ್ನು ದಿಗ್‌ಬಂಧನವೆಸಗುವ ಅನಿಷ್ಟಗಳು. ನುಡಿವುದು, ಕೇಳುವುದು, ಕೋಪ, ಸ್ನೇಹ, ರೋಗ ರುಜಿನಾದಿಗಳೆಲ್ಲ ಪರಮ ಪಂರಜ್ಯೋತಿ ರೂಪವಾದ ಆತ್ಮವನ್ನು ಮುತ್ತಿಕಾಡುತ್ತಿರುವ ಕರ್ಮ ಸಂಕುಲವೆಂದು ಪ್ರತಿಕ್ಷಣದಲ್ಲೂ ನೆನೆಯುತ್ತಿರಬೇಕು. ದೇಹದ ಮೋಹವನ್ನು ತೊರೆದು ಪರಮ ಪರಂಜ್ಯೋತಿ ರೂಪವನ್ನು ಚಿತ್ರಿಸಿಕೊಂಡು ಆ ರೂಪದಲ್ಲೇ ತನ್ಮಯನಾಗಿ ಹೋಗು. ಕೊನೆಗೆ

ಪರಂಜ್ಯೋತಿ ನೀನೇ ಆಗಿ ರಾರಾಜಿಸು !" ಎನ್ನುತ್ತ ಹರಸಿದರು. ನಾಗಮಯ್ಯ ಹರ್ಷಚಿತ್ತನಾಗಿ ಅವರ ಪಾದಧೂಳಿಯನ್ನು ತೆಗೆದುಕೊಂಡು ವಿಭೂತಿಯಂತೆ ಹಣೆಗಿಟ್ಟುಕೊಂಡನು !

* * * * *

ಜಿನಚಂದ್ರರ ಸಲ್ಲೇಖನದ ಸುದ್ದಿ ಸುಂಟರಗಾಳಿಯಾಗಿ ನಾಡಿನಾದ್ಯಂತ ಹರಡಿತು. ನಾಗಮಯ್ಯನ ಲಘು ಸಲ್ಲೇಖನವೂ ಎಲ್ಲರನ್ನೂ ಗಾಬರಿಗೊಳಿಸಿತು. ಮಲ್ಲಪಯ್ಯ ಮತ್ತು ಪುನ್ನಮಯ್ಯ 'ಸಲ್ಲೇಖನ' ವ್ರತವೇ ಇರಬಾರದೆಂದು ವಾದಿಸಿದರು. ತಾವು ಅನುಮತಿ ಕೊಡುವುದಿಲ್ಲವೆಂದು ಪಟ್ಟು ಹಿಡಿದರು. ಮಲ್ಲಪನ ಹೆಂಡತಿ ಮಕ್ಕಳೆಲ್ಲ ಬಂದು ಜಿನಚಂದ್ರರ ಪಾದಕ್ಕೆ ಬಿದ್ದು ಕಂಬನಿ ಮಿಡಿದರು. ಕೊನೆಯಪಕ್ಷ ತಮ್ಮ ಅಜ್ಜನನ್ನಾದರೂ ಈ ಧಾರ್ಮಿಕ ಪಿಡುಗಿನಿಂದ ಉಳಿಸಿಕೊಳ್ಳಬೇಕೆಂದು ನಾಗಮಯ್ಯನ ಮೊಮ್ಮಕ್ಕಳು ಎಂಟು ಮಂದಿಯೂ ಬಂದು ಅಜ್ಜನಿದಿರು ಕುಯ್ಯೋಮರ್ರೋ ಎಂದರು. ಸಂನ್ಯಾಸಿಯಿಂದ ಗೃಹಸ್ಥರೂ ಕೆಡಬೇಕೆ ಎಂದು ಜಿನಚಂದ್ರರನ್ನು ಆಕ್ಷೇಪಿಸಿದರು. ತಮ್ಮ ಅಜ್ಜನಿಗೆ 'ಕಷಾಯಸಲ್ಲೇಖನ'ವೇ ಸಾಕು. ಕಾಯಸಸಲ್ಲೇಖನಕ್ಕೆ ನಾವಾರೂ ಒಪ್ಪಿಗೆ ನೀಡಲಾರೆವು ಎಂದು ಅತ್ತಿಮಬ್ಬೆ ಅಬ್ಬರಿಸಿದಳು. ಅಜ್ಜ, ನಾವು ಹೇಳಿದಂತೆ ನೀನು ಕೇಳುವುದಿಲ್ಲವಾದರೆ ನಾವೂ ನಿನ್ನೊಡನೆ ಉಪವಾಸ ಮುಷ್ಕರ ಹೂಡಿ ಬಿಡುವೆವು ಎಂದು ಗುಂಡುಮಬ್ಬೆ ಹೆದರಿಸಿದಳು. ಚಂಡಮಾರುತ ಬೀಸಿ ನಂದನ ವನದ ಮರಗಿಡ ಬಳ್ಳಿಗಳೆಲ್ಲ ಬುಡಸಹಿತ ಅಲುಗಾಡಿ ಇನ್ನೇನು ಸರ್ವನಾಶ ಕಾದಿದೆಯೋ ಏನೋ ಎನ್ನುವಂತೆ ನಾಗಮಯ್ಯನ ಮನೆತನವೆಲ್ಲ ಅಲ್ಲೋಲ ಕಲ್ಲೋಲ ವಾಯಿತು ! ಮಲ್ಲಪಯ್ಯ ಜೈನಧರ್ಮದ ನೀಷ್ಠುರತೆಯನ್ನು ಕಂಡು ಔಡುಗಚ್ಚಿದನು. ಪುನ್ನಮಯ್ಯ ಕೂಳು ನೀರು ಬಿಟ್ಟು ಸಾಯುವುದಕ್ಕೆ 'ಸಲ್ಲೇಖನ' ಎಂಬ ಹೆಸರು ಬೇರೆ ಎನ್ನುತ್ತ ಕಿಡಿಗಾರಿದನು. ಗುಂಡುಮಯ್ಯ ತಲೆಯಮೇಲೆ ಗುಂಡುಬಿದ್ದವನಂತೆ ತಳ ಮಳಿಸಿದನು. ಎಳಮಯ್ಯ ಎಳವು ಬಂದವನಂತೆ ಗೋಳಾಡಿದನು. ಚಿಕ್ಕಪೊನ್ನಮಯ್ಯ ಇದ್ದಬದ್ದ ಹೊನ್ನನ್ನೆಲ್ಲ ನೀಗಿಕೊಂಡವನಂತೆ ತಲೆಯಮೇಲೆ ಕೈ ಹೊತ್ತು ಕುಳಿತನು. ಆಹವಮಲ್ಲ ಈ ಧಾರ್ಮಿಕಾಹವವನ್ನು ಹೇಗೆ ಎದುರಿಸುವುದೋ ಎಂದು ಚಿಂತಾಕ್ರಾಂತನಾದನು. ನಮ್ಮಜ್ಜ ಇನ್ನಿಲ್ಲವಾಗುವನೇ ಎಂದು ವಲ್ಲ ಅಳುತ್ತಾ ಕುಳಿತನು. ನಾಗಕನ್ನೇ ಎಲ್ಲರೂ ಅಳುವುದವನ್ನು

ಕಂಡು ತಾನೂ ಅತ್ತು ಬಿಟ್ಟಳು. ಅಬ್ಬಕಬ್ಬೆಯಂತೂ ತಾಯನ್ನು ಕಳೆದುಕೊಂಡವಳಂತೆ ಗೋಳಾಡಿದಳು.

ಅವಸರದ ಕರೆಯನ್ನು ಕೇಳಿ ಪೊನ್ನಕವಿ ಪುಂಗನೂರಿಗೆ ಧಾವಿಸಿ ಬಂದನು. ಪಂಪ ಮಹಾಕವಿ ಗಾಳಿಗೆ ಗರಿಮೂಡಿದಂತೆ ಓಡೋಡಿ ಬಂದನು. ಇಲ್ಲಿನ ಪರಿಸ್ಥಿತಿಯನ್ನು ಕಣ್ಣಾರೆ ಕಂಡರು. ಜಿನಚಂದ್ರಮುನಿಗಳನ್ನೂ ನಾಗಮಯ್ಯನನ್ನೂ ಸಂಧಿಸಿ ಅವರ ಅಂತರಂಗದ ಮೊರೆಗೆ ಕಿವಿಗೊಟ್ಟರು. ನಾಗಮಯ್ಯನಿಗೆ ಆಯು ಸನ್ನಿಹಿತವಾಗಿರುವುದನ್ನು ಜಿನಚಂದ್ರರು ಮಹಾಕವಿಗಳಿಬ್ಬರೂ ಈ ಸಲ್ಲೇಖನ ಮಹೋತ್ಸವಕ್ಕೆ ಅನಿ ಕೆಲವು ಕರ್ತವ್ಯದ ಕಡೆ ಪಂಪಕವಿ ಜಿನಚಂದ್ರರ ಗಮನ ಸೆಳೆದನು. ಸಲ್ಲೇಖನವಂತೂ ಅನಿವಾರ್ಯವಾಯಿತು. ಅದನ್ನು ತೆಗೆದುಕೊಳ್ಳುವ ದಿನವನ್ನು ಬೇಕೆಂದೇ ಪಂಪ ಒಂದುವಾರ ಮುನ್ನೂಕಿದನು. ಶ್ರವಣಬೆಳುಗೊಳದಿಂದ ಚಾಮುಂಡರಾಯನ ತಂದೆತಾಯಿಗಳಾದ ಮಹಾಬಲಯ್ಯನನ್ನೂ, ಕಾಳಲ ದೇವಿಯನ್ನೂ ಕರೆಸುವ ಏರ್ಪಾಟುಮಾಡಲು ಪಂಪಕವಿ ಸನ್ನದ್ಧನಾದನು. ನಾಗಮಯ್ಯನ ಮಕ್ಕಳುಮರಿಗೆ ಒಪ್ಪಿಸಬೇಕಾದರೆ ಪಂಪನಿಗೂ ಪೊನ್ನನಿಗೂ ಸಾಕುಬೇಕಾಯಿತು. ಕೊನೆಗೆ ಅವಧಿಜ್ಞಾನ ಸಂಪನ್ನರಾದ ಜಿನ ಚಂದ್ರರು ಅರಿತಿದ್ದ ನಾಗಮಯ್ಯನ ಅಂತ್ಯಕಾಲವನು ವಿವರಿಸಬೇಕಾಯಿತು. ಶ್ರವಣ ಬೆಳಗುಳಕ್ಕೆ ಪೊನ್ನಮಯ್ಯನನ್ನು ಕಳಿಸಿದರು. ಇತ್ತ ಪುಂಗನೂರಿನಲ್ಲಿ ಮಲ್ಲಪ ನಿಂತು ಸಲ್ಲೇಖನ ವಿಧಿಗೆ ಏನೇನು ಸಿದ್ಧತೆಗಳಾಗಬೇಕೋ ಅದನ್ನೆಲ್ಲ ನೋಡಿಕೊಂಡನು.

ಸಲ್ಲೇಖನಕ್ಕಾಗಿ ಶುಭವಾರ, ನಕ್ಷತ್ರ ತಿಥಿ ಇವುಗಳನ್ನು ದೈವಜ್ಞರಾದ ಜಿನಚಂದ್ರರು ನಿರ್ಧರಿಸಿದರು. ಇವರಿಗೆ ಕಟ್ಟಕಡೆಯ ಆಹಾರದಾನ ಮಹೋತ್ಸವವನ್ನು ಭಕ್ತಿಯಿಂದ ಆಚರಿಸಿದರು. ಸೂರ್ಯ ನಡುನೆತ್ತಿಗೇರುವುದಕ್ಕೆ ಮುನ್ನವೇ ಜಿನಚಂದ್ರರು ಬಲಗೈಯನ್ನು ಹೆಗಲಮೇಲಿಟ್ಟುಕೊಂಡು ಎಡಗೈ ಕಂಕುಳಲ್ಲಿ ಪಿಂಚವನ್ನೂ ಕೈಯಲ್ಲಿ ಕಮಂಡಲವನ್ನೂ ಹಿಡಿದುಕೊಂಡು ಭಿಕ್ಷೆಗೆ ಹೊರಟರು. ಬೀದಿಯುದ್ದಕ್ಕೂ ಇದ್ದ ಜೈನಗೃಹಸ್ಥರ ಮನೆಗಳ ಮುಂದೆ ಚಪ್ಪರ ಹಾಕಿ ತಳಿರುತೋರಣ ಕಟ್ಟಿ ಸಿಂಗರಿಸಿದ್ದರು. ಮನೆಯ ಮುಂದೆಲ್ಲ ಸಾರಿಸಿ ರಂಗೋಲೆ ಇಟ್ಟಿದ್ದರು. ಮನೆಮನೆಯ ಮುಂಭಾಗದಲ್ಲೂ ದಂಪತಿಗಳು ಮಂಗಳ ದ್ರವ್ಯವನ್ನು ಹಿಡಿದು ಮುನಿಯನ್ನು ಹಾರೈಸಿ ಚಾತಕ

ಪಕ್ಷಿಯಂತೆ ಕಾದರು. ಜಿನಚಂದ್ರರರು ಬೀದಿಯುದ್ದಕ್ಕೂ ನಿರ್ವಿಕಾರಿಗಳಾಗಿ ಮಂದಗಮನದಿಂದ ಹೊರಟರು. ಅಂದು ಎಲ್ಲರ ಮನೆಯಲ್ಲೂ ಮುನಿಗೆ ಆಹಾರದಾನ ನೀಡುವುದಕ್ಕಾಗಿ ಸಕಲಸಿದ್ಧತೆಗಳೂ ಆಗಿತ್ತು. ಭಕ್ತಿಯ ಭರತವೆದ್ದಾಗ ಬಡವ–ಬಲ್ಲಿದ ಎಂಬ ಭೇದವುಂಟೆ ? ಜಿನಮುನಿ ತನಗೆ ಸರಿ ಕಂಡ ಕಡೆ ಆಹಾರಕ್ಕೆ ಬಂದುಬಿಡುವರು. ಜಿನಮುನಿಗೆ ಆಹಾರದಾನವಿತ್ತರೆ ಗೋಮಟೇಶನಿಗೆ ಮಹಾಮಸ್ತಕಾಭಿಷೇಕವೆಸಗಿದಷ್ಟೇ ಪುಣ್ಯವೆಂದು ಶ್ರಾವಕರು ನಂಬಿರುವರು. ಒಂದು ಮನೆಯ ಬಳಿ ಮಹಾಮುನಿ ನಿಂತುಕೊಂಡರು. ಅಲ್ಲಿದ್ದ ದಂಪತಿಗಳು ಮುನಿಗೆ ಬಲವಂದು ಕಲಶದಲ್ಲಿದ್ದ ನೀರನ್ನು ಧಾರಾಪೂರ್ವಕ ಸುರಿದು ಕಾಲು ತೊಳೆದರು. ಏನಾಯಿತೋ ಏನೋ ಜಿನಚಂದ್ರರು ಆ ಮನೆಯನ್ನು ತೊರೆದು ಹೊರಟು, ಮುಂದಿನ ಮನೆಗೆ ಸಾಗಿದರು. ಪಾಪ ನಮಗೆ ಆಹಾರದಾನವೀಯುವ ಭಾಗ್ಯ ಕೈಗೆ ಬಂದೂ ತಪ್ಪಿತಲ್ಲ ಎಂದು ಆ ದಂಪತಿಗಳು ಮೈಯಿಳಿದವರಂತೆ ಮಮ್ಮಲ ಮರುಗಿದರು ! ಒಂದೆರಡು ಕಡೆ ಹೀಗೇ ಆಗಿ ಕೊನೆಗೆ ಜಿನಚಂದ್ರರು ನಾಗಮಯ್ಯನ ಮನೆಯ ಬಳಿ ಬಂದು ನಿಂತುಕೊಂಡರು. ಮಲ್ಲಪ ಮತ್ತು ಆತನ ಪ್ರಿಯತಮೆ ಅಬ್ಬಕಬ್ಬೆ ಈ ಸದವಕಾಶಕ್ಕಾಗಿಯೇ ಗಂಟೆಗಟ್ಟಲೆ ಕಾದಿದ್ದರು. ಮುನಿ ನಿಂತಾಗ ಈ ದಂಪತಿಗಳು ತಿಷ್ಠಿತಿಷ್ಠ ಎಂದು ಗಂಧ, ಅಕ್ಷತೆ, ಪುಷ್ಪಗಳಿಂದ ದರುಶನಾಂಜಲಿಯನ್ನು ಮಾಡಿದರು. ಹೊನ್ನಿನ ಗಿಂಡಿಯನ್ನೆತ್ತಿ ಜಲ ಶುದ್ಧಿಯೆಸಗಿದರು; ಮೂರುಬಾರಿ ಪ್ರದಕ್ಷಿಸಿ ಮುನಿಗೆ ಅಡ್ಡಬಿದ್ದರು. ನಿವಾಳಿಯನ್ನಿಟ್ಟು ಜಿನಚಂದ್ರರನ್ನು ಭಕ್ತಿಯಿಂದ ಸ್ವಾಗತಿಸಿದರು.

ಮನೆಯಲ್ಲಿ ಮುನಿಯ ಪಾದಪೂಜೆಯೆಸಗಿದರು. ಮುನಿ ನಿಂತುಕೊಂಡೇ ಆಹಾರ ಸ್ವೀಕರಿಸಬೇಕು. ಒಬ್ಬೊಬ್ಬರಾಗಿ ಬಂದು ಒಂದೊಂದು ತುತ್ತು ಆಹಾರ ನೀಡಿ ಬದುಕಿದೆವೆಂದು ಹಿಗ್ಗಿದರು. ಮಹಾಮುನಿ ಮಾತ್ರ ಎಡ ಅಂಗೈ ಮೇಲೆ ಬಲ ಅಂಗೈ ಇಟ್ಟುಕೊಂಡು ಕೈಗೆ ಹಾಕಿದ ತುತ್ತನ್ನು ಹೆಬ್ಬೆರಳಲ್ಲಿ ಚೆನ್ನಾಗಿ ಪರೀಕ್ಷಿಸಿ ಅನಂತರ ಬಾಯಿಗೆ ಹಾಕಿಕೊಳ್ಳುತ್ತಿದ್ದರು. ನಾಗಮಯ್ಯ, ಪಂಪಕವಿ ಹಾಗೂ ಮಲ್ಲಪನ ಪರಿವಾರವೆಲ್ಲ ಬಂದು ಮುನಿಗೆ ಆಹಾರದಾನವಿತ್ತರು. ಈಗಾಗಲೆ ಸದವಕಾಶ ತಪ್ಪಿ ತಳಮಳಿಸುತ್ತಿದ್ದ ದಂಪತಿಗಳೂ ಇಲ್ಲಿಗೇ ಬಂದು ಮುನಿಯ ಶ್ರೀಹಸ್ತಕ್ಕೆ ಆಹಾರವಿತ್ತು ಹರಕೆ ತೀರಿದವರಂತೆ ಹಿಗ್ಗಿದರು ! ಖೇಚರ ಕನ್ನೆಯಂತಿದ್ದ ಅತ್ತಿಮಬ್ಬೆ ಮತ್ತು

ಗುಂಡುಮಬ್ಬೆಯರೂ ಭಕ್ತಿಯಿಂದ ಬಳುಕುತ್ತ ಮಹಾತ್ಮನಿಗೆ ಆಹಾರವಿತ್ತರು! ಅದು ಬೇಕು ಇದು ಬೇಕು ಎನ್ನದೆ ಮಹರ್ಷಿ ಸೆರೆಗೆ ಸಿಕ್ಕಿದವನಂತೆ ಬೇಕೋ ಬೇಡವೋ ಎಂಬಂತೆ ಅನ್ನವನು ಸ್ವೀಕರಿಸಿದರು. ಭವ್ಯಾತ್ಮರು ಕಲಸಿಕೊಡುವ ಅನ್ನದಲ್ಲಿ ದಿವ್ಯತೆ ಬರದಿರುತ್ತದೆಯೇ? ಮಹರ್ಷಿಯ ಕೈ ಸೋಕಿದಾಕ್ಷಣ ಭಕ್ತರಿತ್ತ ಅನ್ನೋದಕ ಸಿದ್ಧರಸದಲ್ಲಿ ಬಿದ್ದ ಕಬ್ಬೊಣ್ಣಿನಂತೆ ಪಾವನವಾಗಿ ಬಿಡುತ್ತಿತ್ತು! ತಮಗೆ ಸಾಕಾದಾಗ ಮಹರ್ಷಿ ಎಡ ಅಂಗೈ ಮೇಲೆ ಇಟ್ಟಿದ್ದ ಬಲ ಅಂಗೈಯನ್ನು ತೆಗೆದರು. ಶ್ರಾವಕರು ಸುರಿದ ನೀರಿನಲ್ಲಿ ಕೈತೊಳೆದುಕೊಂಡು ಮುಖಮರ್ಜನ ಮಾಡಿಕೊಂಡರು. ಅನಂತರ ಚಣ ಕಾಲ ಎಲ್ಲೋ ಹೋಗಿದ್ದ ತಾಯಿಕೋಳಿ ತನ್ನ ಮೊಟ್ಟೆಗಳನ್ನು ನೆನೆಸಿಕೊಂಡು ಧಾವಿಸಿ ಕಾವಿಗೆ ಕೂರುವಂತೆ ಮಹರ್ಷಿ ಅಂತರ್ಮುಖಿಯಾದರು !

ಚಂದ್ರಪ್ರಭತೀರ್ಥಂಕರನ ಪೂಜೆಯಾಯಿತು. ಜಿನಗಂಧೋದಕವನ್ನು ಮಹರ್ಷಿ ಜಿನಚಂದ್ರರು ಭಕ್ತಿಯಿಂದ ಸ್ವೀಕರಿಸಿ ಕಣ್ಣಿಗೊತ್ತಿಕೊಂಡರು. ಅದನ್ನೇ ತಲೆಗೆ ಚಿಮುದರು. ಜಿನಾಲಯದ ಕೈಸಾಲೆಯಲ್ಲಿ ಅನ್ನನೀರನ್ನು ತೊರೆದು ಹಂಸೋಪಾಸನೆ ಎಸಗುತ್ತ ಕುಳಿತರು. ಈ ಅಸಹಾಯ ಶೌರ್ಯವನ್ನು ನೋಡಲು ಸಹಸ್ರಾರು ಜನ ಶ್ರಾವಕರು ನೆರೆದರು. ಈ ಸುದ್ದಿ ಕಾಳ್ಗಿಚ್ಚಿನಂತೆ ಹಬ್ಬಿತು. ನಾಡಿನ ಮೂಲೆ ಮೂಲೆಯಿಂದ ಶ್ರಾವಕರೂ, ಜಿನಚಂದ್ರರ ಯೋಗಕ್ಷೇಮವನ್ನು ದಿನದಿನವೂ ಸುತ್ತಮುತ್ತಣ ರಾಜಮಹಾರಾಜರಿಗೆ ತಿಳಿಸಲು ವ್ಯವಸ್ಥೆಯಾಯಿತು. ಎಲ್ಲೆಲ್ಲೂ ಭಕ್ತಿಯ ಆವೇಶ ! ಅಹಿಂಸೆಯ ಪರಿವೇಶ ! ಬಂಕಾಪುರದಿಂದ ಅಜಿತಸೇನಾಚಾರ್ಯರೂ, ಶ್ರಾವಣಬೆಳಗುಳದಿಂದ ನೇಮಿಚಂದ್ರಚಾರ್ಯರೂ, ತಲಕಾಡಿನಿಂದ ಮಹಾಬಲಯ್ಯನೂ ಮಡದಿ ಕಾಳಲಾದೇವಿಯೂ ಅವಸರವಸರವಾಗಿ ಬಂದರು. ಈ ವೇಳೆಗಾಗಲೆ ಮಹರ್ಷಿ ಸಲ್ಲೇಖನ ತೆಗೆದುಕೊಂಡು ಎರಡುವಾರ ಸಂದಿದ್ದಿತು. ಕೆಲದಿನ ಮಹರ್ಷಿ ದಿನಚರಿಗಾಗಿ ಆಗಾಗ ಎದ್ದು ಓಡಾಡುತ್ತಿದ್ದರು. ಬಂದವರೊಡನೆ ಧಾರ್ಮಿಕ ಚಿಂತನೆಯಲ್ಲಿ ಪಾಲುಗೊಳ್ಳುತ್ತಿದ್ದರು. ನಗು ನಗುತ್ತ ಭವ್ಯಾತ್ಮರನ್ನು ಈಕ್ಷಿಸುತ್ತಿದ್ದರು. ಜೈನಧರ್ಮದ ಪ್ರಸಾರಕ್ಕೂ ಜೈನಸಂಸ್ಕೃತಿಯ ಏಳಿಗೆಗೂ ಬದ್ಧಕಂಕಣರಾಗುವಂತೆ ಅಜಿತಸೇನಾಚಾರ್ಯರಿಗೂ ನೇಮಿಚಂದ್ರಾಚಾರ್ಯರಿಗೂ ಅಪ್ಪಣೆಕೊಟ್ಟರು. ಮಹಾಬಲಯ್ಯನನ್ನು ಸನಿಹಕ್ಕೆ ಕರೆದು ಅಹಿಂಸಾವೃಕ್ಷ ಬಾಡದಂತೆ ನೋಡಿಕೊಳ್ಳಬೇಕೆಂದು ತಿಳಿಸಿದರು. ಕಾಳಲಾದೇವಿಯನ್ನು

ಪಕ್ಕದಲ್ಲಿ ಕೂರುವಂತೆ ಹೇಳಿ "ತಾಯಿ, ನಿನ್ನಲ್ಲಿ ಧಾರ್ಮಿಕ ಮಹತ್ವಾಕಾಂಕ್ಷೆ ಮೂಡುವುದು. ಭರತೇಶ ಕೃತಯುಗದಲ್ಲಿ ಕಡೆಸಿದ ೫೨೦ ಬಿಲ್ಲು ಪ್ರಮಾಣದ ಬಾಹುಬಲಿಯ ಬ್ರುಹದ್‌ರೂಪವನ್ನು ದಿನವೂ ಕಲ್ಪಿಸಿಕೊಂಡು ಅದಕ್ಕೆ ಭಾವಪೂಜೆ ಎಸಗುತ್ತಾ ಇರು" ಎಂದು ಆದೇಶವಿತ್ತರು.

ರಾಷ್ಟ್ರಕೂಟ ಸಾರ್ವಭೌಮನಾದ ಮುಮ್ಮಡಿ ಕೃಷ್ಣರಾಯನನ್ನು ಕರೆದು ಸಾರ್ವ ಭೌಮತ್ವಕ್ಕಿಂತ ಆತ್ಮಸಿದ್ಧಿ ಹಿರಿದೆಂದು ಎಚ್ಚರಿಸಿದರು ! ಗಂಗರ ಮಾರಸಿಂಹನನ್ನು ಕರೆದು ನಿಸ್ಸಂಗನಾಗುವುದನ್ನು ಅಭ್ಯಾಸಮಾಡಿಕೊಳ್ಳುವಂತೆ ಆದೇಶವಿತ್ತರು.

ಜಿನಚಂದ್ರರು ಸಲ್ಲೇಖನ ತೆಗೆದುಕೊಂಡು ಪ್ರಾರಂಭದಲ್ಲಿ ಒಬ್ಬರಾದ ಮೇಲೊಬ್ಬ ರಂತೆ ಬಂದು ಪಂಪ ಪೊನ್ನ ನಾಗಮಯ್ಯ ಇವರು ತೀರ್ಥೇಶರ ಭವ್ಯ ಚರಿತೆಯನ್ನು ಓದಿದರು. ಜಿನಚಂದ್ರರು ಪುಣ್ಯಚರಿತೆಯನ್ನು ಆಲಿಸಿ ಆನಂದಾಶ್ರು ಹನಿಸುತ್ತ ದೈಹಿಕ ಸಂಕಟವನ್ನು ಮರೆತರು. ಅಪರೂಪಕ್ಕೆ ಗಂಡುಕೂಸನ್ನು ಹೆತ್ತಾಗ ಜನನಿ ಪ್ರಸವ ವೇದನೆಯನ್ನು ಕಡೆಗಣಿಸುವಂತೆ ಮಹರ್ಷಿ ಪರಂಜ್ಯೋತಿರೂಪವಾದ ತಮ್ಮ ಆತ್ಮವನ್ನು ಚಿತ್ರಿಸಿಕೊಳ್ಳುತ್ತ ಕ್ಷುತ್‌ಪಿಪಾಸಾದಿ ಪರೀಷಹಗಳನ್ನು ಮರೆತರು. ತೀರ್ಥಂಕರ ಪುರಾಣ ಪ್ರವಚನ ಮುಗಿದ ಮೇಲೆ ಕುಂದಕುಂದರ ಸಮಯಸಾರವನ್ನು ಸಿದ್ಧಾಂತ ಚಕ್ರವರ್ತಿ ನೇಮಿಚಂದ್ರಾಚಾರ್ಯರಿಂದಲೂ ಅಜಿತಸೇನರಿಂದಲೂ ಮತ್ತೆ ಮತ್ತೆ ಓದಿಸಿ ಜಿನಚಂದ್ರರು ಶುದ್ಧ ನಿಶ್ಚಯಧರ್ಮದಲ್ಲಿ ತನ್ಮಯರಾದರು. ವೀರಕೇಸರಿಯಾದ ಈ ಮಹರ್ಷಿಯಿದಿರು ಮಾಯ, ಮೋಹ, ಮಾನ, ಲೋಭಗಳು ಯಾವೊಂದು ಸುಳಿಯಲಾರದೇ ಹೋದವು, ಸದಾ ನಿರ್ವಿಕಲ್ಪ ಸಾಮಾಧಿಯಲ್ಲಿ ತನ್ಮಯರಾಗಿ ಜಿನಚಂದ್ರರು ಧ್ರುವತಾರೆಯಂತೆ ಕಂಗೊಳಿಸಿದರು.

ಸಲ್ಲೇಕನ ತೆಗೆದುಕೊಂಡು ಮೂರುವಾರ ಉರುಳಿದ ಮೇಲೆ ಯತಿವರ್ಯರಿಗೆ ಏಳಲಾರದಂತೆ ನಿತ್ರಾಣವಾಯಿತು. ಒಂದು ಮಗ್ಗುಲಾಗಿ ಮಲಗಿ ಪಂಚಪರಮೇಷ್ಠಿಗಳಲ್ಲಿ ಒಂದಾದವರಂತೆ ಸಮಾಧಾನಚಿತ್ತರಾಗಿದ್ದರು. ಮೈ ಕೃಶವಾಯಿತು. ಸ್ವರತೆವಳಿತು. ಕಣ್‌ಮಾತ್ರ ಉಜ್ವಲವಾಗಿಯೇ ಇದ್ದವು. ಮುಗುಳ್ನಗೆ ಆಗಾಗ ಮಿಂಚುತ್ತಿತ್ತು. ಇವರು ಸಲ್ಲೇಖನಕ್ಕೆ ಕುಳಿತ ದೇಗುಲ ಯತ್ರಾಸ್ಥಳವಾಯಿತು; ಅತಿಶಯ ಕ್ಷೇತ್ರವಾಯಿತು; ಸಹಸ್ರಾರು ಜನ ಘಳಿಗೆ ಘಳಿಗೆಗೂ ಬಂದು

ಮಹರ್ಷಿಯನ್ನು ಕಂಡು ಭಕ್ತಿಯಿಂದ ವಂದಿಸಿ ಹೊಸಬರಿಗೆ ಜಾಗಬಿಟ್ಟು ಒತ್ತಟ್ಟಿಗೆ ಹೋಗುತ್ತಿದ್ದರು. ನಾಲ್ಕನೇ ವಾರಕ್ಕೆ ಅಡಿಯಿಟ್ಟಾಗ ಮಹರ್ಷಿ ಮಾತಾಡುವುದನ್ನೇ ಬಿಟ್ಟರು. ಸದಾ ಒಂದೇ ಪಕ್ಕೆಯಲ್ಲಿ ಮಲಗಿರುತ್ತಿದ್ದರು. ದೇಹವೆಲ್ಲ ಎಲುಬಿನ ಗೂಡಾಗಿ ಹೋಯಿತು !

ಇತ್ತ ನಾಗಮಯ್ಯ ದಿನದಿನವೂ ಆಹಾರವನ್ನು ತಗ್ಗಿಸುತ್ತ ಬಂದನು. ಮಲ್ಲಪ ಮತ್ತು ಪೊನ್ನಮಯ್ಯ ವ್ಯವಹಾರವನ್ನೆಲ್ಲ ನಿಲ್ಲಿಸಿ ತಂದೆಯ ಬಳಿಯೇ ಕುಳಿತರು. ತಂದೆಯೊಡನೆ ಮಲಗಿದರು. ಅವನು ಎದ್ದಾಗ ತಾವು ಏಳುವರು. ಆತನ ಊಟವಾದ ಮೇಲೆ ತಾವು ಉಣ್ಣುವರು. ಹದಿನಾರರ ಕನ್ನೆಯರಾದ ಅತ್ತಿಮಬೆ, ಗುಂಡುಮಬ್ಬೆಯರು ತಮ್ಮ ತಾಯಿಯೊಡನೆ ಸೇರಿಕೊಂಡು ನಾಗಮಯ್ಯನಿಗೆ ಆಹಾರದಾನ ಕೊಟು ಅನಂತರ ತಾವೂ ಮಿತಾಹಾರವನ್ನು ಸೇವಿಸುತ್ತಿದ್ದರು. ಒಂದು ಕಡೆ ಸಂಪೂರ್ಣವಾಗಿ ಆಹಾರವನ್ನು ತ್ಯಜಿಸಿ ಕುಳಿತ ಜಿನಚಂದ್ರರು, ಇನ್ನೊಂದು ಕಡೆ  ದಿನದಿನವೂ ಆಹಾರವನ್ನು ಕಡಿಮೆ ಮಾಡಿ ಕೃಶವಾಗುತ್ತಿದ್ದ ನಾಗಮಯ್ಯ. ಈ ಕಠಿಣ ವ್ರತವನ್ನು ಕಂಡೂ ಕಂಡೂ ಅತ್ತಿಮಬ್ಬೆಗೆ ಬಾಳಿನ ಪರಮರಹಸ್ಯ ಅಸ್ಪಷ್ಟವಾಗಿ ಅರಿವಾಯಿತು; ಭೋಗೋಪಭೋಗದ ಮೇಲೆ ಕೊಕ್ಕರಿಕೆಯುಟಾಯಿತು ! ಗುಂಡುಮಬ್ಬೆಗೆ ಸಾವೆಂಬುದು ಸದರವಾಯಿತು.

ಜಿನಚಂದ್ರರೂ ಸಲ್ಲೇಖನ ತೆಗೆದುಕೊಂಡು ಮೂವತ್ತು ಮೂರುದಿನ ಉರುಳಿದವು. ನಾಗಮಯ್ಯನ ವ್ರತವೂ ಪೂರ್ಣವಾಯಿತು. ಒಂದು ದಿನ ಸಂಪೂರ್ಣವಾಗಿ ಉಪವಾಸ ವಾಚರಿಸಿದನು. ಪೂರ್ಣೋಪವಾಸದ ಎರಡನೆಯ ದಿನವೂ ನಾಗಮಯ್ಯ ಹರ್ಷಚಿತ್ತನಾಗಿದ್ದನು. ಸಮಯಸಾರವನ್ನಾಲಿಸಿ ಆಲಿಸಿ ಅದರಲ್ಲೇ ತನ್ಮಯನಾಗಿ ಹೋದನು. ಕೊನೆಯಲ್ಲಿ ಅತ್ತಿಮಬ್ಬೆ ಮತ್ತು ಗುಂಡುಮಬ್ಬೆಯರು ವೀಣೆಯರು ನುಡಿಸುತ್ತ ಜಿನಸ್ತುತಿಯನ್ನು ಹಾಡಿದರು. ಪರಮಾತ್ಮಪ್ರಕಾಶ. ನಾದವಾದಂತೆ ಈ ಕನ್ನೆಯರ ಕಲಕಂಠದಿಂದ ನಾದಮಾಧುರ್ಯ ಜುಳಜುಳನಿಳಿಯಿತು ! ಇದನ್ನು ಕೇಳುತ್ತ ನಾಗಮಯ್ಯ ದಿವ್ಯನಾದದಲ್ಲಿ ಒಂದಾಗಿ ಹೋದನು.

ನುಡಿಸಿನುಡಿಸಿ ಸಾಕಾಗಿ ಈ ಮಹಿಳೆಯರು ಅಜ್ಜನ ಮುಖ ನೋಡಿದರು. ಮಂದಸ್ಮಿತ ಅಲ್ಲಿದ್ದರೂ ಉಸಿರಾಟದ ಚಿನ್ಹೆಯಿರಲಿಲ್ಲ. ಗೋಡೆಗೆ ಒರಗಿದ್ದ ನಾಗಮಯ್ಯ ನಿಶ್ಚೇಷ್ಟಿತನಾಗಿ ಹೋಗಿದ್ದನು. ಇವರಿಬ್ಬರೂ ಅಜ್ಜ ಎಂದು ಅರುಚಿದರು. ಮಲ್ಲಪ ಹಾಗು ಪೊನ್ನಮಯ್ಯ

ಓಡಿಬಂದರು. ಪರಿಕಿಸಿದರು. ಪ್ರಾಣಜ್ಯೋತಿ ಆರಿತ್ತು. ಪಂಪ ಪೊನ್ನ ಎಲ್ಲರೂ ಬಂದು ಸುತ್ತಿಕೊಂಡರು. ಈ ಅವಾಂತರದಲ್ಲಿ ಚಣಕಾಲ ಜಿನಚಂದ್ರರನ್ನು ಎಲ್ಲರೂ ಮರೆತರು ! ಸೂರ್ಯ ನಡುನೆತ್ತಿಗೆ ಏರಿತು. ಆ ವೇಳೆಗೆ ಜಿನಚಂದ್ರರ ಪ್ರಾಣವೂ ಹೋಗಿತ್ತು. ಶಿಷ್ಯನನ್ನು ಮುಂಚಿತವಾಗಿ ಸಾಗುಹಾಕಿ ಮಹರ್ಷಿ ಅನಂತರ ಹೊರಟಂತಾಯಿತು !

ಎಲ್ಲರೂ ಕಂಬನಿ ಮಿಡಿದರು. ನಾಗಮಯ್ಯನ ಸಂಸಾರಕ್ಕೆ ಭೂಕಂಪವಾದಂತಾಯಿತು! ಚಾಲುಕ್ಯ ಧ್ವಜವನ್ನು ಕೆಳಗಿಳಿಸಿದರು. ರಾಷ್ಟ್ರಕೂಟ ಸಾಮ್ರಾಜ್ಯದ ಪ್ರತೀಕವಾದ ಬಾವುಟವೂ ಕೆಳಗಿಳಿಯಿತು ! ಗಂಗರ ಧ್ವಜವೂ ಅರ್ಧಕ್ಕಿಳಿಯಿತು ! ಮಲ್ಲಪ ಮಾಳಿಗೆಯೇ ಕಳಚಿ ಮೇಲೆ ಬಿದ್ದನಂತೆ ಗೋಳಾಡಿದನು. ಪೊನ್ನಮಯ್ಯ ರಣಧೀರನಾದರೂ ಈ ಸಂದರ್ಭದಲ್ಲಿ ಹೆಂಗರುಳಾಗಿ ಅತ್ತನು. ನಾಗಮಯ್ಯನ ಸೊಸೆ ಅಬ್ಬಕಬ್ಬೆ ತಂದೆಯನ್ನು ನೀಗಿಕೊಂಡ ತಬ್ಬಲಿಯಾಗಿ ಕಂಬನಿ ಮಿಡಿದಳು. ಈಕೆಯ ಮಕ್ಕಳೆಲ್ಲ ಒಟ್ಟಾಗಿ ಬಂದು ಅಜ್ಜನ ಕಳೇಬರವನ್ನು ತಬ್ಬಿಕೊಂಡು ಗೋಳಾಡಿದರು. ಅತ್ತಿಮಬ್ಬೆಗೆ ಆಕಾಶವೇ ಕಳಚಿಬಿದ್ದಂತಾಯಿತು. ಗುಂಡುಮಬ್ಬೆ ಎದೆಚಚ್ಚಿಕೊಂಡು ಅಬ್ಬರಿಸಿದಳು. ನಾಗಮಯ್ಯ ಸತ್ತುದು ಜೈನಸಮಾಜಕ್ಕೆ ತುಂಬಲಾರದ ನಷ್ಟವಾಯಿತು. ವೆಂಗಿಮಂಡಲದ ಕಮ್ಮೆನಾಡು ರಾಷ್ಟ್ರನಾಯಕನನ್ನು ನೀಗಿಕೊಂಡಂತಾಯಿತು. ಎಲ್ಲರ ಸಂಕಟವೂ ಒಂದು ತೂಕವಾದರೆ ಅತ್ತಿಮಬ್ಬೆ ಮತ್ತು ಗುಂಡುಮಬ್ಬೆ ಇವರ ಸಂಕಟವೇ ಒಂದು ತೂಕ! ಇವರಿಬ್ಬರೂ ತಂದೆತಾಯಿ ಬಳಿ ಬೆಳೆದುದಕ್ಕಿಂತ ಹೆಚ್ಚಾಗಿ ಅಜ್ಜನ ಹೆಗಲೇ ಇವರಿಬ್ಬರ ಗಾಳಿ ಸಂಚಾರದ ಪಲ್ಲಕ್ಕಿಯಾಗಿತ್ತು. ಅಜ್ಜನಿಗೆ ಹಸಿವಾದಾಗ ಇವರಿಗೂ ಹಸಿವಾಗುತ್ತಿತ್ತು. ಅಜ್ಜನ ನೀರಡಿಕೆಯೇ ಇವರ ನೀರಡಿಕೆಯಾಗಿ, ಅಜ್ಜನ ತೂಗಡಿಕೆಯೇ ಇವರಿಗೂ ತೂಗಡಿಕೆಯಾಗಿತ್ತು ! ಪ್ರಾಯದ ಪೆಂಪು ಇಣುಕುತ್ತಿರುವಾಗಲೇ ಇಬ್ಬರ ಬಾಳಿನಲ್ಲೂ ಅಜ್ಜನ ಸಾವಿನ ಬರಸಿಡಿಲು ಬಡಿದಂತಾಯಿತು !

ಮಹಾಮುನಿಯ ಪವಿತ್ರ ಕಳೇಬರವನ್ನು ಗಂಗರ ಮಾರಸಿಂಹ, ಪಂಪ, ರಾಷ್ಟ್ರಕೂಟರ ಕೃಷ್ಣರಾಯ ಹಾಗೂ ಪುನ್ನಮಯ್ಯ ಇವರು ಸೇರಿಕೊಂಡು ಜಿನಬಿಂಬವಿರುವ ಸಿಬಿಗೆಯನ್ನು ಹೊರುವಂತೆ ಭಕ್ತಿಯಿಂದ ಹೊತ್ತುಕೊಂಡು ಹೊರಟರು. ದೇವರ ಸೇವೆಗೆ ಆಳು ಅರಸ ಎಂಬ ಭೇದವುಂಟೆ? ಇದರ ಹಿಂದೆ ನಾಗಮಯ್ಯನ ಕಳೇಬರವನ್ನ ಅತ್ತಿಮಬ್ಬೆ, ಗುಂಡುಮಬ್ಬೆ, ಮಲ್ಲಪ ಹಾಗೂ ಅಬ್ಬಕಬ್ಬೆಯರು ಹೊತ್ತುಕೊಂಡು ಹೊರಟರು. ಎಷ್ಟೋ ಜನ ಶ್ರಾವಕರು ಮುಂದೆ ಬಂದು ಹೆಮ್ಮಕ್ಕಳನ್ನು ನಿವಾರಿಸಲು ಪ್ರಯತ್ನಿಸಿ ವಿಫಲರಾದರು. ರಾಜಮರ್ಯಾದೆಯೊಡನೆ ಈ ಕಳೇಬರಗಳನ್ನು ಮೆರವಣಿಗೆಯಲ್ಲಿ ಸಾಗಿಸಿದರು. ಬೀದಿಯುದ್ದಕ್ಕೂ ಇದ್ದ ಜನಸಂದಣಿ ಕಂಬನಿಯ ಕಾಣಿಕೆಯನ್ನು ಅರ್ಪಿಸಿತು. ಮಸಣದಲ್ಲಿ ಶ್ರೀಗಂಧ ಮತ್ತು ಕರ್ಪೂರದ ರಾಶಿಯ ಮೇಲಿಟ್ಟು ಕಳೇಬರಗಳನ್ನು ದಹಿಸಿದರು. ಜಿನಚಂದ್ರರ ಕಳೇಬರಕ್ಕೆ ಪಂಪ ಕವಿ ಬೆಂಕಿ ತಾಕಿಸಿದನು. ನಾಗಮಯ್ಯನ ಕಳೇಬರಕ್ಕೆ ಮಲ್ಲಪನೂ ಅವನ ಮಕ್ಕಳೂ ಸೇರಿಕೊಂಡು ಬೆಂಕಿತಾಕಿಸಿದರು. ಇವರು ತನಕ ಇವರಿಬ್ಬರೂ ತಮಗೆ ಸರಿಕಂಡ ರೀತಿಯಲ್ಲಿ ಲೋಕಹಿತವನ್ನು ಸಾಧಿಸಿದ ಮಹಿಮಾವಂತರು ! ಸತ್ತಮೇಲೂ ಸುತ್ತಣ ಲೋಕದ ಹಿತಕಾಂಕ್ಷಿಗಳಾಗಿರುವಂತೆ ಇವರಿಬ್ಬರ ಚಿತೆಗಳಿಂದಲೂ ಸುಗಂಧ ಹೊಮ್ಮಿ ಒಂದೆರಡು ಹರದಾರಿ ಪಸರಿಸಿತು !